ಬಂದದ್ದು ಮಾತ್ರ ವಿಚಿತ್ರ ಎನಿಸುವಂತಿತ್ತು ಅವಳಿಗೆ.

ಆಸ್ಪತ್ರೆ ತಲುಪುವಷ್ಟರಲ್ಲಾಗಲೇ ಕ್ಯೂ ದೊಡ್ಡದಾಗಿ ಬೆಳೆದಿತ್ತು. ಇವರೂ ಹೋಗಿ ಕ್ಯೂನಲ್ಲಿ ನಿಂತರು. ಇನ್ನೊಂದರ್ಧ ಗಂಟೆಯ ಹೊತ್ತಿಗೆ ಕ್ಯೂ ಇನ್ನೂ ಬೆಳೆಯಿತು. ಇವರ ಸರತಿ ಬರುವ ಹೊತ್ತಿಗೆ ಹನ್ನೆರೆಡು ದಾಟಿತ್ತು. ಒಳ ಹೋದಾಗ ಸಪೂರವಾಗಿದ್ದ, ಮೂಗು ಬಾಯಿಯ ಮೇಲೆ ಮಾಸ್ಕ್ ತೊಟ್ಟ, ಫ್ರೇಮ್ ಇಲ್ಲದ ಕನ್ನಡಕ ಧರಿಸಿದ್ದ ವೈದ್ಯರು, ಮೆಲುವಾಗಿ ನರ್ಸ್ ಗೆ ಪ್ರತಿಮಾಳ ರಕ್ತ ತೆಗೆದುಕೊಳ್ಳಲು ಹೇಳಿದರು. ಅವರು ಗಂಡನೊಂದಿಗೆ ಹಳೇ ಪರಿಚಯದವರೆಂಬಂತೆ ವರ್ತಿಸುವುದು ನೋಡಿ ಆಶ್ಚರ್ಯಪಟ್ಟಳು ಪ್ರತಿಮಾ. ಅವಳಿಗೆ ಗೊಂದಲವಾಯಿತು. ವಾತಾವರಣದ ತಂಪಿಗೆ ಮಾತೇ ಹೊರಡಲಿಲ್ಲ. ನರ್ಸ್ ಅವಳನ್ನು ಪಕ್ಕದ ಲ್ಯಾಬಿಗೆ ಕರೆದೊಯ್ದು, ಸಿರೇಂಜಿನಲ್ಲಿ ರಕ್ತ ತೆಗೆದುಕೊಂಡು ನಂತರ ಬರಲು ಹೇಳಿ ಕಳುಹಿಸಿದರು. ಹೊರಬಂದಾದ ಮೇಲೂ ಅದೇ ಮೌನ ತಣ್ಣಗೆ ಆವರಿಸಿತ್ತು. ರಿಪೋರ್ಟ್ ಬಂದಾಗ ವೈದ್ಯರು ಬರ ಹೇಳಿದರು. ಇಬ್ಬರನ್ನೂ ಎದಿರು ಕೂರಿಸಿಕೊಂಡು, ಗಂಡನ ಕಡೆ ನೋಡುತ್ತಾ, 'ನೋಡಿ ಇವರದ್ದೂ ಎಲಿಸಾ(ELISA) ಟೆಸ್ಟ್ ಪಾಸಿಟಿವ್ ಬಂದಿದೆ. ಇದರ ಅರ್ಥ ನೀವೇನೋ ತಪ್ಪು ಮಾಡಿದ್ದೀರಿ ಅಂತಲ್ಲ. ಈ ಕಾಯಿಲೆ ಬರುವ ಬೇರೆ ಬೇರೆ ಮಾರ್ಗಗಳೂ ಇವೆ. ಬಂದಿದೆ ಅಂದ ಮೇಲೆ ಅದನ್ನು ಧೈರ್ಯವಾಗಿ ಎದುರಿಸದೆ ವಿಧಿ ಇಲ್ಲ. ಹಾಗಾಗಿ ಧೈರ್ಯಗೆಡಬೇಡಿ...' ಎಂದು ಹೇಳಿ, ಒಂದಷ್ಟು ಮಾತ್ರೆ, ಔಷಧಿಗಳ ಹೆಸರುಗಳನ್ನು ಚೀಟಿಯ ಮೇಲೆ ಬರೆದುಕೊಟ್ಟು ಕಳುಹಿಸಿದರು.



ಪ್ರತಿಮಾಳಿಗೆ ಏನು ನಡೆಯುತ್ತಿದೆ ಎಂದೇ ಅರ್ಥವಾಗದ ಅಯೋಮಯತೆ... ಗಾಡಿಯ ಬಳಿ ಬರುತ್ತಿದ್ದಂತೇ ಮಾಧವನ ದುಃಖದ ಕಟ್ಟೆ ಒಡೆದು ಹೋಯಿತು. ಸುತ್ತ ಜನರಿದ್ದಾರೆ ಎನ್ನುವುದನ್ನೂ ಮರೆತು, 'ಪ್ರತಿಮಾ ಇದು ಹೆಂಗ್ ಬಂತು ನನಗೆ ಅಂತ ನನಗೇ ಗೊತ್ತಿಲ್ಲ ಕಣೇ... ನಾ ಯಾರ ಸಹವಾಸಾನೂ ಮಾಡಿಲ್ಲ... ನನ್ನುನ್ ನಂಬು... ಈಗ ನನ್ನಿಂದ ನಿನಗೂ...' ಎನ್ನುವ ಹೊತ್ತಿಗೆ ಅವನ ಧ್ವನಿ ಸಂಪೂರ್ಣ ಉಡುಗಿಹೋಯಿತು. ಅವ ಅವಳ ಕಾಲ ಮೇಲೆ ಬಿದ್ದು ಕ್ಷಮೆ ಯಾಚಿಸತೊಡಗಿದ. ಪ್ರತಿಮೆಯಾಗಿ ಹೋದಳು ಪ್ರತಿಮಾ. ಮಾತೇ ಹೊರಡಲಿಲ್ಲ.

ಎಲ್ಲಿ ಮಾತು ಅರ್ಥ ಕಳೆದುಕೊಳ್ಳುತ್ತದೋ ಅಲ್ಲಿ ಮೌನ ಮಾತ್ರ ಉಸಿರಾಡಬಲ್ಲದು. ಬದುಕುವ ಜಿದ್ದಿಗೆ ಸಾವನ್ನು ಹೆದರಿಸುವ ಕಸುವನ್ನು ತುಂಬಬಹುದಾ... ಈ ಕ್ಷಣ ಯಾವ ಪೂರ್ವ ತಯಾರಿಯೂ ಇಲ್ಲದ ನಾನು ಇಷ್ಟೇ ಹೀಗೇ ವರ್ತಿಸಲು ಸಾಧ್ಯ ಎನ್ನುವುದನ್ನು ಮಿತಿ ಎನ್ನಬಹುದೇ... ಎಂಬ ಏನೇನೋ ತಲೆಬುಡವಿರದ ಯೋಚನೆಗಳು ಹುಟ್ಟಿ ಸತ್ತವು. ಗಂಡನನ್ನು ಭುಜ ಹಿಡಿದು ಎಬ್ಬಿಸಿಕೊಂಡೇ ಅಲ್ಲಿಂದ ಹೊರಟಳು. ಒಂದಷ್ಟು ದೂರ ಬಂದ ಮೇಲೆ ಗಾಡಿ ನಿಲ್ಲಿಸಲು ಹೇಳಿದಳು. ಇಬ್ಬರಲ್ಲೂ ಮಾತಿಲ್ಲ. ಅಲ್ಲೇ ಇದ್ದ ಮರದ ಕೆಳಗೆ ಕುಳಿತರು. ಯಾರೂ ಇಲ್ಲದ್ದು ನೋಡಿ ಜೋರಾಗಿ ಎದೆ ಬಿರಿಯುವಂತೆ ಅಳತೊಡಗಿದಳು ಪ್ರತಿಮಾ. ಮಾಧವನಿಗೂ ತಡೆಯಲಾಗಲಿಲ್ಲ. ಅದೆಷ್ಟೋ ಹೊತ್ತು ಇಬ್ಬರೂ ಅತ್ತೇ ಅತ್ತರು. ಕಣ್ಣೀರೆಲ್ಲಾ ಖಾಲಿಯಾಗಿ ಕಣ್ಣುಗಳು ಬರಿದಾದಾಗ ನಿಟ್ಟುಸಿರು ಮಾತ್ರವೇ ಉಳಿಯಿತು. ಪ್ರತಿ ಜೀವಿಯೂ ಬದುಕಲೆಂದೇ ಕೊನೆವರೆಗೂ ಹೋರಾಡುತ್ತದೆ. ಇಷ್ಟು ದಿನದ ಪಯಣ ಒಂದು ಬಗೆಯದಾದರೆ, ಇನ್ನು ಮುಂದಿನದು ಮತ್ತೊಂದು ರೀತಿಯ ಸವಾಲಿನದ್ದು. ಜೊತೆಯಾಗೇ ಪಯಣಿಸಬೇಕಾದವರು ನಾವು ಎಂದುಕೊಂಡು ದೀರ್ಘವಾಗಿ ಉಸಿರ ಹೊರಹಾಕಿದಳು. ಗಂಡನನ್ನು ಗಟ್ಟಿಯಾಗಿ ತಬ್ಬಿಕೊಂಡಳು. 'ನಾವು ತಪ್ಪೇ ಮಾಡಿಲ್ಲ ಅಂದ್ಮೇಲೆ ಎಲ್ಲರ ಹಾಗೆ ಬದುಕುವ ಎಲ್ಲ ಅಧಿಕಾರ ನಮ್ಗೂ ಇದೆ... ನಾವೂ ಬದ್ಕಾಣ ಅಷ್ಟೇ...' ಅಂದಳು.

ಇದ್ದಕ್ಕಿದ್ದ ಹಾಗೇ ಮೋಡ ಕವಿದು ಇಡೀ ವಾತಾವರಣವನ್ನೇ ಕತ್ತಲೆ ಆವರಿಸಿಕೊಂಡಿತು. ಗುಡುಗು ಸಿಡಿಲುಗಳು ಆರ್ಭಟಿಸತೊಡಗಿದವು. ಹಿಂದೆಯೇ ದಪ್ಪ ದಪ್ಪ ಹನಿಗಳ ಹೊತ್ತು ಸಶಬ್ದವಾಗಿ ಮಳೆ ಸುರಿಯತೊಡಗಿತು. ಕರಿ ಮೋಡಗಳ ಹಿಂಬದಿಯಿಂದ ಮಿಂಚು ಹೊರ ಹೊಮ್ಮುವಾಗ ಬೆಳ್ಳಿಗೆರೆಯೊಂದು ಮೂಡಿದಂತಾಗಿ ಪ್ರತಿಮಾ ನಕ್ಕಳು.

●